# ಮೋಹಕ ಸ್ಟಾರ್, ಕ್ಲೌಡ್ ಹೊಸ ಫ್ಯಾಷನ್ ಟ್ರೆಂಡ್

**ಉಡುಪಿನಲ್ಲಿ ಮೋಡದ ಚಿತ್ತಾರ, ನಕ್ಷತ್ರಗಳ ಮಿಂಚು. ಒಡವೆಯಲ್ಲಿಯೂ ಆಕಾಶ, ನಕ್ಷತ್ರಗಳದ್ದೇ ಚಿತ್ತಾರ. ಇದೊಂದು ರೀತಿಯ ಉಡುಪು–ಒಡವೆಯ ವಿನ್ಯಾಸ ಚಮತ್ಕಾರ. ಇವೆಲ್ಲವೂ ಈಗಿನ ಲೇಟೆಸ್ಟ್ ಫ್ಯಾಷನ್ ಟ್ರೆಂಡ್.**

**■ ಕವಿತಾ ವಿನು ಭಟ್**



ನೀಲಾಕಾಶ ಎಂದರೆ ಅಗಾಧ ಮಾಯೆ
ಅದ್ಭುತಗಳ ಅಡಗಿಸಿಟ್ಟ ಛಾಯೆ
ಆಗಸದ ಎಣಿಕೆಗೆ ನಿಲುಕದ ನಕ್ಷತ್ರ ಸಾಲು
ಕಣ್ಣಾಮುಚ್ಚಾಲೆ ಆಡುವ ಮೋಡಗಳು
ನೀಲಿಬಿಳಿ ಮುಗಿಲಿನ ನಡುವೆ
ಸಾವಿರ ನಕ್ಷತ್ರಗಳ ಸರಮಾಲೆ

ನೀಲಿ ಆಗಸ ಮತ್ತು ನಕ್ಷತ್ರ ಪುಂಜಗಳು ಕವಿಗಳಿಗೆ ಸ್ಫೂರ್ತಿ. ಇದನ್ನು ಅನುಕರಿಸುವುದು ಒಡವೆ, ಉಡುಪು ವಿನ್ಯಾಸಗಾರನಿಗೆ ಪ್ರೀತಿ. ಅತ್ಯಾಕರ್ಷಕ ಎನಿಸುವ ಮೋಡ ನಕ್ಷತ್ರಗಳ ಚಿತ್ತಾರವಿರುವ ಡ್ರೆಸ್, ಸೀರೆ, ಕಿವಿಯೋಲೆ, ಬ್ರೇಸ್ಲೆಟ್, ನೆಕ್ಲೇಸ್, ಪೆಂಡೆಂಟ್‌ಗಳು ಆಭರಣ ವಿನ್ಯಾಸಕನ ಕೈಯಲ್ಲಿ ಬಗೆ ಬಗೆಯ ರೂಪ ಪಡೆದು ಮಿಂಚಿದರೆ ಹೇಗಿರುತ್ತದೆ ಎಂಬ ಕಲ್ಪನೆಯೇ ಅದ್ಭುತ ಅಲ್ಲವೇ? ಚಂದದ ಮೋಡ ಮತ್ತು ನಕ್ಷತ್ರಗಳ ಪ್ರಿಂಟ್ ಮತ್ತು ಡಿಸೈನ್‌ಗಳನ್ನು 'ಸ್ಟಾರ್ ಮತ್ತು ಕ್ಲೌಡ್ ಪ್ರಿಂಟ್ ಆ್ಯಕ್ಸೆಸರೀಸ್' ಎನ್ನಲಾಗುತ್ತದೆ. ಆನ್‌ಲೈನ್ ಶಾಪಿಂಗ್ ಸೈಟ್‌ಗಳಲ್ಲಿ, ಶಾಪಿಂಗ್ ಸೆಂಟರ್‌ಗಳಲ್ಲಿ ರಾರಾಜಿಸುತ್ತಿರುವ ಈ ಒಡವೆ ವಸ್ತ್ರಗಳನ್ನು ನಿಮ್ಮ ಕಲೆಕ್ಷನ್‌ನಲ್ಲಿ ಸೇರಿಸಿಕೊಂಡು ಹೊಸತನದ ಫ್ಯಾಷನ್ ಮೆರೆಯಬಹುದು.

## ಸ್ಟಾರ್ ಮತ್ತು ಕ್ಲೌಡ್ ಪ್ರಿಂಟೆಡ್ ಡ್ರೆಸ್

ಕ್ಯಾಷುಯಲ್ ಮತ್ತು ಫಾರ್ಮಲ್ ಎರಡೂ ತರಹದ ಬಳಕೆಗೆ ಸೂಟ್ ಆಗುವ ಕಾಟನ್, ಪಾಲಿಯೆಸ್ಟರ್, ಲೆನಿನ್, ಸಿಂಥೆಟಿಕ್, ಸಿಲ್ಕ್ ಫ್ಯಾಬ್ರಿಕ್‌ಗಳಲ್ಲಿ ಲಭ್ಯವಿರುವ ಸೀರೆ, ಟೀ ಶರ್ಟ್, ಲಾಂಗ್ ಫ್ರಾಕ್, ಲೆಹಂಗಾ, ಮಿಡಿ ಮ್ಯಾಕ್ಸಿಗಳೆಲ್ಲವೂ ಆಕರ್ಷಕ. ಪಾರ್ಟಿ ಫಂಕ್ಷನ್‌ಗಳಲ್ಲಿ ಧರಿಸಲು ಹೊಳೆಯುವ ಸ್ಟಾರ್ ಪ್ರಿಂಟ್ ಡ್ರೆಸ್‌ಗಳು ರಿಚ್ ಲುಕ್ ನೀಡುತ್ತವೆ. ನೈಟ್ ಪಾರ್ಟಿಗಳ ದೀಪದ ಬೆಳಕಿನಲ್ಲಿ ಹೊಳೆಯುವ ನಕ್ಷತ್ರದ ಉಡುಪು ಸೆಂಟರ್ ಆಫ್ ಅಟ್ರಾಕ್ಷನ್ ಆಗಿದೆ.

ನೀಲಿ ಬಣ್ಣದ ಉಡುಪಿನ ತುಂಬ ಬೆಳ್ಳನೆಯ ನೊರೆಯಂತಹ ಮೋಡದ ಪ್ರಿಂಟ್ ಆಕರ್ಷಣೀಯ. ಮಹಿಳೆಯರ ಆಲ್ ಟೈಮ್ ಫೇವರೆಟ್ ಸೀರೆಯ ಒಡಲಿನ ತುಂಬ ಮೋಡದ ಚಿತ್ತಾರ ಇದ್ದರಂತೂ ಎಲಿಗೆಂಟ್ ಲುಕ್ ಖಂಡಿತ. ನೈಲಾನ್, ಖಾದಿ, ಶಿಫಾನ್, ಪೇಪರ್ ಸಿಲ್ಕ್, ಜಾರ್ಜೆಟ್ ಸೀರೆಗಳ ಮೇಲೆ ಮೋಡಗಳ ಡಿಸೈನ್ ಚಂದ. ಕ್ಲೌಡ್ ಪ್ರಿಂಟೆಡ್ ಅನಾರ್ಕಲಿ, ಲಾಂಗ್ ಶರ್ಟ್, ಕುರ್ತಾ, ಸ್ಕರ್ಟ್‌ಗಳು ಮೆಟ್ರೊಪಾಲಿಟನ್ ಹುಡುಗಿಯರಿಗೆ ಹಾಟ್ ಫೇವರೆಟ್. ಕ್ಲೌಡ್ ಡಿಸೈನ್‌ಗಳು ಎಥ್ನಿಕ್ ಮತ್ತು ಸೆಮಿ ಎಥ್ನಿಕ್ ಎರಡಕ್ಕೂ ಅನ್ವಯಿಸುತ್ತವೆ.

## ಸ್ಟಾರ್ ಡಿಸೈನ್ ಜ್ಯುವೆಲ್ಲರಿ

ವಜ್ರದ ಹಾರದ ತುದಿಯಲ್ಲಿ ಚಂದದ ನಕ್ಷತ್ರ ಪುಂಜದ ಡಿಸೈನ್ ಎವರ್‌ಗ್ರೀನ್. ಚಿನ್ನ ಬೆಳ್ಳಿ, ವಜ್ರದ ಒಡವೆಗಳಲ್ಲದೆ ಸೆರಾಮಿಕ್, ಟೆರ್‍ರಾಕೋಟ ಒಡವೆಗಳಲ್ಲಿಯೂ ಸ್ಟಾರ್ ಡಿಸೈನ್ ಇತ್ತೀಚಿನ ದಿನಗಳಲ್ಲಿ ವಿಜೃಂಭಿಸುತ್ತಿದೆ. ಸ್ಟಾರ್ ಶೇಪ್‌ನಲ್ಲಿರುವ ಬಳೆ, ರಿಂಗ್, ಸ್ಟಡ್ಸ್, ಬೆಳ್ಳಿ ಚೈನ್ ಫ್ಯಾಷನ್‌ಪ್ರಿಯರಿಗೆ ಬಲು ಇಷ್ಟ.

ಕಿವಿಗಳಲ್ಲಿ ನಕ್ಷತ್ರ ಆಕಾರದ ಹ್ಯಾಂಗಿಂಗ್ ಮುಂಗುರುಳ ಹಿಂದೆ ಹೊಳೆಯುವುದೇ ಒಂದು ಚಂದದ ದೃಶ್ಯ. ಸ್ಟಾರ್ ಡಿಸೈನ್ ಸ್ಟಡ್ಸ್, ಜುಮುಕಿ, ಲೋಲಾಕುಗಳೆಲ್ಲವೂ ಜನಪ್ರಿಯತೆ ಗಳಿಸಿದೆ. ನಕ್ಷತ್ರಗಳನ್ನು ಪೋಣಿಸಿದಂತಹ ನೆಕ್ಲೇಸ್, ಚೋಕರ್, ಚೈನ್‌ಗಳು ರಿಚ್ ಲುಕ್ ಕೊಡುತ್ತವೆ. ಲಾಂಗ್ ಚೈನ್ ತುದಿಯಲ್ಲಿ ಹೊಳಪುಳ್ಳ ಸ್ಟಾರ್ ಪೆಂಡೆಂಟ್ ಅತ್ಯಾಕರ್ಷಕ. ಬೆಳ್ಳಿ ಚೈನ್‌ಗಳಲ್ಲಿ ನಕ್ಷತ್ರದ ಡಿಸೈನ್ ಇದೀಗ ಟ್ರೆಂಡ್‌ನಲ್ಲಿದೆ. ಸಾಂಪ್ರದಾಯಿಕ ಸೊಂಟದ ಪಟ್ಟಿಯಲ್ಲಿ ನಕ್ಷತ್ರ ಜೋಡಣೆಯೂ ಚಂದ ಕಾಣುತ್ತದೆ. ಬ್ರೇಸ್ಲೆಟ್, ಬಳೆ, ಉಂಗುರಗಳಲ್ಲಿಯೂ ಸ್ಟಾರ್ ಡಿಸೈನ್‌ಗಳು ಚಂದ ಕಾಣುತ್ತವೆ.

ಹೇರ್ ಆ್ಯಕ್ಸೆಸರೀಸ್, ಆಂಕ್ಲೆಟ್, ಕಾಲುಂಗುರ, ರಿಸ್ಟ್ ವಾಚ್, ಕ್ರೌನ್‌ಗಳಲ್ಲಿಯೂ ಸ್ಟಾರ್ ಡಿಸೈನ್ ಜನಪ್ರಿಯತೆ ಪಡೆದಿದೆ. ಕೂದಲಿನ ಶೃಂಗಾರದಲ್ಲಿ ನಕ್ಷತ್ರಗಳ ಜೋಡಣೆ ಫ್ಯಾಷನ್ ವಿನ್ಯಾಸಕಾರರ ಕೈನಲ್ಲಿ ನೂರಾರು ವಿನ್ಯಾಸ ಸೃಷ್ಟಿಸಿದೆ. ಹೇರ್ ಬ್ಯಾಂಡ್, ರಬ್ಬರ್ ಬ್ಯಾಂಡ್, ಕ್ರೌನ್, ಬೈತಲೆ ಮುತ್ತುಗಳಲ್ಲಿ ನಕ್ಷತ್ರಗಳು ಚಂದ.



